ಪ್ರಮಾಣ ವಚನ ಭೋಧಿಸಿದ ದಿನಾಂಕಃ 25-10-2023
ಪಾಟೀ ಸವಾಲು ಆರೋಪಿಯ ಪರವಾಗಿ ಶ್ರೀ. ಹೆಚ್.ಎಮ್.ಪಿ. ವಕೀಲರಿಂದ

೮. ನನ್ನ ಸ್ವಂತ ಊರು ಜೇವರ್ಗಿ ತಾಲೂಕಿನ ಆಂದೋಲಾ ಗ್ರಾಮ. ಯಾದಗಿರಿ ಇಂದ ಆಂದೋಲಾ ೮೦ ಕಿ.ಮೀ. ದೂರ ಇದೆ. ನಾನು ಶಹಪೂರದಲ್ಲಿ ಮನೆ ಮಾಡಿಕೊಂಡಿದ್ದೇನೆ. ನಾನು ಶಹಾಪೂರದಿಂದ ಯಾದಗಿರಿಗೆ ಪ್ರತಿ ದಿನ ಓಡಾಡುತ್ತೇನೆ. ನಮ್ಮ ಕಛೇರಿ ಬೆಳಿಗ್ಗೆ 10-00 ಗಂಟೆಗೆ ತೆರೆಯುತ್ತದೆ. ಸಾಮಾನ್ಯವಾಗಿ ಕರ್ತವ್ಯದ ಅವಧಿಯಲ್ಲಿ ಎಲ್ಲಾದರೂ ಕಳುಹಿಸಬೇಕಾದರೆ ಮೇಲಾಧಿಕಾರಿಗಳು ಆದೇಶ ಮಾಡಿ ಆವಕ ಜಾವಕ ರಜೇಸ್ಟರನಲ್ಲಿ ಆ ಬಗ್ಗೆ ನಂಬರ ಕೊಡುತ್ತಾರೆ ಎಂದರೆ ಸರಿ. ನಿ.ಪಿ.೭೮ ರಲ್ಲಿ ಯಾವುದೇ ರೀತಿ ಪತ್ರದ ಸಂಖ್ಯೆ ನಮೂದಾಗಿಲ್ಲ ಎಂದರೆ ಸರಿ. ನಮ್ಮ ಮೇಲಾಧಿಕಾರಿಗಳು ನನಗೆ ಲೋಕಾಯುಕ್ತ ಕಛೇರಿಗೆ ಹೋಗುವಂತೆ ಹೇಳಿದ್ದರು ಪತ್ರ ಕೊಟ್ಟಿಲ್ಲ. ನಾವು ಸಹ ಮೇಲಾಧಿಕಾರಿಗಳ ಆದೇಶ ಇದ್ದರೂ ಕರ್ತವ್ಯದ ಅವಧಿಯಲ್ಲಿ ಹೊರಗೆ ಹೋಗಬೇಕಾದರೆ ಮುಮೆಂಟ ರಜೇಸ್ಟರನಲ್ಲಿ ನಮೂದು ಮಾಡಬೇಕು ಎಂದರೆ ಸರಿ. ಆದರೆ ನಾನು ಆ ರೀತಿ ನಮೂದು ಮಾಡಿರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ದಿಃ ೭೮.02.201, 01.03.2015 ಮತ್ತು 03.03.2015 ರಂದು ಲೋಕಾಯುಕ್ತ ಕಛೇರಿಗೆ ಹೋಗಿದ್ದು ಆ ಬಗ್ಗೆ ಮುಮೆಂಟ ರಜೇಸ್ಟರನಲ್ಲಿ ನಮೂದು ಮಾಡಿರುವುದಿಲ್ಲ. ನಾನು ಕೇವಲ ಮೇಲಾಧಿಕಾರಿಗೆ ಮೌಖಿಕವಾಗಿ ತಿಳಿಸಿ ಹೋಗಿದ್ದೆ. ದಿಃ 01.03.2015 ರಂದು ಮತ್ತು 03.03.2015 ರಂದು ಲೋಕಾಯುಕ್ತ ಕಛೇರಿಯಿಂದ ಪತ್ರ ಮುಖೇನ ನನಗೆ ಬರುವಂತೆ ಕೋರಿಲ್ಲ. ನಾನು ಬೆಳಿಗ್ಗೆ 11-30 ಗಂಟೆಗೆ ಲೋಕಾಯುಕ್ತ ಕಛೇರಿಗೆ ಹೋದೆ. ನಾನು ಹೋಗುವಷ್ಟರಲ್ಲಿ ಫಿರ್ಯಾದಿ ಠಾಣೆಯಲ್ಲಿ ಇದ್ದರು. ನಾನು ದೂರನ್ನು ಓದಿ ನೋಡಲಿಲ್ಲ. ಆ ಸಮಯದಲ್ಲಿ ಆರೋಪಿಯ ಬಳಿ ಫಿರ್ಯಾದಿಗೆ ಸಂಬಂಧಪಟ್ಟ ಕೆಲಸ ಬಾಕಿ ಇತೋ ಇಲ್ಲವೋ ಎಂಬ ಬಗ್ಗೆ ನಾನು ಯಾವುದೇ ದಾಖಲೆಯನ್ನು ಪರಿಶೀಲಿಸಲಿಲ್ಲ. ಅದೇ ರೀತಿ ಪ್ರವೀಣಕುಮಾರ ಸಹ ಯಾವುದೇ ದಾಖಲೆಯನ್ನು ಪರಿಶೀಲಿಸಲಿಲ್ಲ. ನಾವು ಪಂಚರಾಗುವ ಮೊದಲು ಲೋಕಾಯುಕ್ತ ಕಛೇರಿಯಲ್ಲಿ ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲ ದಾಖಲೆಯನ್ನು ಪರಿಶೀಲಿಸಬೇಕು ಎಂದರೆ ಸರಿ.

ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.